ಮಾತುಗಳು ರಾಮ್ ಲಾಲನನ್ನು ಫ್ಯಾಕ್ಟರಿಯಿಂದ ಹೊರಗೆಸೆದಿದ್ದವು. ರಾಮ್ ಲಾಲ್ ರೂಮು ತಲುಪಿದಾಗ ತಾರಾನಾಥ ಆಗಲೇ ಬಂದುಬಿಟ್ಟಿದ್ದ. ''ನಮ್ಮ ಟ್ರಾವೆಲ್ಸ್ ಕಂಪನೀನ ಮಧ್ಯಾಹ್ನದ ವೇಳೆಗೆ ಮುಚ್ಚಿಬಿಟ್ರು ಅಣ್ಣ. ಈ ತಿಂಗಳು ವೇತನದಲ್ಲಿ ನಾಲ್ಕು ಸಾವಿರ ಕೊಟ್ರು. ಹತ್ತು ಕೆಜಿ ಗೋಧಿ ಹಿಟ್ಟು, ಐದು ಕೆಜಿ ಅಕ್ಕಿ, ಮೂರು ಲೀಟರ ಎಣ್ಣೆ, ಒಂದಿಷ್ಟು ಬಿಸ್ಕತ್ತು ತಂದೆ. ಅಂಗಡಿಗಳಲ್ಲಿ ವಿಪರೀತ ನೂಕುನುಗ್ಗಲು ಇತ್ತು...'' ಎಂದ. ರಾಮ್ ಲಾಲ್ ತಮ್ಮನ ಮುಂದಾಲೋಚನೆಯನ್ನು ಮನಸ್ಸಿನಲ್ಲೇ ಮೆಚ್ಚಿ, ''ಒಳ್ಳೇದೆ ಆಯ್ತು ತಾರಾ...'' ಎಂದ.

ಇದಾಗಿ ವಾರವಾಗಿತ್ತು. ಟಿವಿ ಚಾನೆಲ್ಲುಗಳಲ್ಲಿ ಬಿತ್ತರವಾಗುತ್ತಿದ್ದ ದೃಶ್ಯಗಳು ಎದೆ ನಡುಗಿಸುತ್ತಿದ್ದವು. ದೇಶದ ಶಹರುಗಳು ಸ್ಮಶಾನ ಸದೃಶ್ಯವಾಗಿದ್ದವು. ದೇಶದಾದ್ಯಂತ ಎಲ್ಲಾ ತರಹದ ಆರ್ಥಿಕ ಚಟುವಟಿಕೆಗಳು ಸ್ಥಗಿತಗೊಂಡಿದ್ದವು. ಶಾಲಾ ಕಾಲೇಜುಗಳು ಹೋಟೆಲ್, ಸಿನಿಮಾ, ಬಾರ್ ಅಂಡ್ ರೆಸ್ಟೋರೆಂಟ್, ಎಲ್ಲಾ ತರಹದ ಕೈಗಾರಿಕೆಗಳು, ಎಲ್ಲಾ ರೀತಿಯ ಸಾರಿಗೆ ವ್ಯವಸ್ಥೆಗಳು ಬಂದ್ ಆಗಿದ್ದವು. ಜೀವನಾವಶ್ಯಕ ವಸ್ತುಗಳನ್ನು ಕೊಳ್ಳಲು ದಿನದಲ್ಲಿ ಒಂದಿಷ್ಟು ಸಮಯವನ್ನು ನಿಗದಿಪಡಿಸಲಾಗಿತ್ತು. ಅನೇಕ ಕಡೆ ಆಹಾರ ಹಂಚುತ್ತಿದ್ದರೆ ಪ್ರಾಣಿಗಳಿಗಿಂತಲೂ ಕಡೆಯದಾಗಿ ಜನ ಮುಗಿಬೀಳುತ್ತಿದ್ದರು. ಆಸ್ಪತ್ರೆಗಳಲ್ಲಿ ವೈದ್ಯಕೀಯ ಸಿಬ್ಬಂದಿ ಕೊರೊನಾ ವೈರಸ್ ಸೋಂಕಿತರನ್ನು ಉಪಚರಿಸುವಲ್ಲಿ ಹಗಲಿರುಳೆನ್ನದೆ ನಿರತರಾಗಿದ್ದರು. ಆದೇಶ ಮೀರಿ ರಸ್ತೆಗಳಲ್ಲಿ ಓಡಾಡುತ್ತಿದ್ದ ಜನರನ್ನು ಪೊಲೀಸರು ಬಲವಾಗಿ ದಂಡಿಸುತ್ತಿದ್ದರು. ದುಡಿಮೆಯಿಲ್ಲದೆ ಬಡವರು, ಕೂಲಿ ಕಾರ್ಮಿಕರಲ್ಲಿ ಆಹಾರಕ್ಕೆ ಹಾಹಾಕಾರ ಉಂಟಾಗಿತ್ತು. ಸರ್ಕಾರಗಳು ಪಡಿತರ ಮೂಲಕ ಬಡಬಗ್ಗರಿಗೆ ಆಹಾರ ವಿತರಿಸಲು ಪ್ರಯತ್ನ ಪಡುತ್ತಿದ್ದವು. ಪ್ರಪಂಚದಾದ್ಯಂತ ಲಕ್ಷಾಂತರ ಜನರು ರೋಗದಿಂದಾಗಿ ಸಾಯುತ್ತಿದ್ದರು. ಸತ್ತವರನ್ನು ಬಂಧುಗಳ ವಶಕ್ಕೂ ನೀಡದೆ ಆಸ್ಪತ್ರೆ ಸಿಬ್ಬಂದಿಯೇ ಮಣ್ಣು ಮಾಡುತ್ತಿದ್ದರು. ಕೋಟ್ಯಂತರ ಜನ ಉದ್ಯೋಗಗಳನ್ನು ಕಳೆದುಕೊಂಡು ಪರಿತಪಿಸುತ್ತಿದ್ದರು. ಕೆಲವು ದೇಶಗಳಲ್ಲಿ ಹೆಣಗಳನ್ನು ಸಾಮೂಹಿಕವಾಗಿ ಯಂತ್ರಗಳ ಮೂಲಕ ಗುಂಡಿಗಳನ್ನು ತೋಡಿ ಹೂಳುತ್ತಿದ್ದ ದೃಶ್ಯಗಳು ಮೈ ನಡುಗಿಸುತ್ತಿದ್ದವು. ರೈತರು ತಾವು ಬೆಳೆದ ಬೆಳೆಗಳನ್ನು ಮಾರಾಟ ಮಾಡಲಾಗದೆ ಗೋಳಿಡುತ್ತಿದ್ದರು. ಕೆಲವು ರೈತರು ಬೆಳೆ ಬೆಳೆದ ಹೊಲಗಳಲ್ಲೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು. ಕುಡಿತಕ್ಕೆ ದಾಸರಾದ ಕೆಲವರು ಕುಡಿತ ಸಿಗದೆ ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳೂ ಸುದ್ದಿಯಾಗುತ್ತಿದ್ದವು. ಅತ್ಯಂತ ದಾರುಣವಾದ ದೃಶ್ಯಗಳೆಂದರೆ ಜೀವನೋಪಾಯಕ್ಕಾಗಿ ಹಳ್ಳಿಗಳಿಂದ ಪಟ್ಟಣಗಳಿಗೆ ಬಂದಿದ್ದ ವಲಸೆ ಕಾರ್ಮಿಕರು ತಮ್ಮ ತಮ್ಮ ಊರುಗಳನ್ನು ತಲುಪಲು ಪಡುತ್ತಿದ್ದ ಪಡಿಪಾಟಲುಗಳು. ಮಕ್ಕಳು, ಮುದುಕರೆನ್ನದೆ ಹಸಿವು, ಬಾಯಾರಿಕೆಗಳಿಂದಲೇ ನೂರಾರು ಕಿಲೋಮೀಟರ್ ನಡೆದು ಹೋಗುತ್ತಿದ್ದರು. ಕೆಲವು ಕಡೆ ಇಂಥ ಕಾರ್ಮಿಕರನ್ನು ಕದ್ದು ಕರೆದುಕೊಂಡು ಹೋಗುತ್ತಿದ್ದ ವಾಹನಗಳು ಅಪಘಾತಕ್ಕೀಡಾಗಿ ಅನೇಕ ಕಾರ್ಮಿಕರು ದಾರುಣ ಸಾವಿಗೀಡಾಗಿದ್ದರು. ಇಂಥ ಭೀಕರ ದೃಶ್ಯಗಳನ್ನು ನೋಡಬೇಕಾಗಬಹುದೆಂದು ಜನ ಭಾವಿಸಿರಲಿಲ್ಲ. ಇವೆಲ್ಲವನ್ನೂ ನೋಡುತ್ತಿದ್ದ ರಾಮ್ ಲಾಲನಿಗೂ ಏನಾದರಾಗಲೀ ತಮ್ಮನೊಡನೆ ಊರಿಗೆ ಹೋಗಿಬಿಡಬೇಕೆನ್ನುವ ಬಲವಾದ ಹಂಬಲ ಹುಟ್ಟಿಕೊಂಡಿತ್ತು. ಅಲ್ಲದೆ ಊರಿನಿಂದ ಪ್ರತಿದಿನ ಆತಂಕ ತುಂಬಿಕೊಂಡು ಮಾಡುತ್ತಿದ್ದ ತಂದೆ ತಾಯಿಯ ಫೋನ್ ಕರೆಗಳು ಅವನ ಧೃತಿಗೆಡಿಸುತ್ತಿದ್ದವು.

ಇಂಥ ಸಂದರ್ಭದಲ್ಲಿ ದಿಲ್ಲಿ ಸರ್ಕಾರ ದಿಲ್ಲಿಯಲ್ಲಿರುವ ವಿವಿಧ ರಾಜ್ಯಗಳಲ್ಲಿನ ವಲಸೆ ಕಾರ್ಮಿಕರನ್ನು ತಮ್ಮ ತಮ್ಮ ಊರುಗಳಿಗೆ ಕಳುಹಿಸಲು ಉಚಿತ ಬಸ್ಸು ವ್ಯವಸ್ಥೆ ಮಾಡುವುದಾಗಿ ಘೋಷಿಸಿತ್ತು. ಮತ್ತು ಎಲ್ಲಾ ಬಸ್ಸುಗಳು ಹೊರಡುವ ಜಾಗ ಆನಂದ ವಿಹಾರ್ ಬಸ್‌ಸ್ಟ್ಯಾಂಡ್ ಎಂದು ನಿಗದಿಪಡಿಸಿತ್ತು. ಊರಿಗೆ ಹೋಗಲು ಇದೇ ತಕ್ಕ ಸಮಯವೆಂದು ತೀರ್ಮಾನಿಸಿದ ರಾಮ್ ಲಾಲ್ ಮನೆಯ ಓನರ್